# ‘ಭಾರತವೇ ನೆಚ್ಚಿನ ತಂಡ, ಆದರೆ...’

**1983ರ ವಿಶ್ವಕಪ್ ವಿಜೇತ ತಂಡದ ಸದಸ್ಯ ಸೈಯದ್ ಕೀರ್ಮಾನಿ ಸಂದರ್ಶನ**

◆ **ಈ ಸಲದ ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡ ಯಾವುದು?**

ಭಾರತೀಯನಾಗಿ ಖಂಡಿತವಾಗಿಯೂ ನಮ್ಮ ದೇಶವೇ ನೆಚ್ಚಿನ ತಂಡವೆಂದು ಅಭಿಮಾನದಿಂದ ಹೇಳುವೆ. ತವರಿನಲ್ಲಿ ಟೂರ್ನಿ ನಡೆಯುವ ಕಾರಣ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್, ಪಾಕಿಸ್ತಾನಕ್ಕೆ ಸರಿಸಮನಾಗಿ ಭಾರತ ಆಡುತ್ತದೆ. ನಾಕೌಟ್ ಹಂತಕ್ಕೂ ಪ್ರವೇಶಿಸುತ್ತದೆ. ಭಾರತ ಯುವ ಮತ್ತು ಅನುಭವಿ ಆಟಗಾರರನ್ನು ಒಳಗೊಂಡಿದೆ. ಸಮತೋಲನ ಹೊಂದಿದೆ. ಸ್ಪಿನ್ ಮತ್ತು ವೇಗದ ಬೌಲಿಂಗ್‌ನಲ್ಲಿ ಭಾರತ ಉತ್ತಮವಾಗಿದೆ. ಕ್ರಿಕೆಟಿಗನಾಗಿ ಹೇಳುವುದಾದರೆ ವಿಶ್ವದ ಹತ್ತು ತಂಡಗಳೂ ಸರ್ವಶ್ರೇಷ್ಠ.

◆ **ಉಳಿದ ತಂಡಗಳ ಬಗ್ಗೆ ಏನು ಹೇಳುವಿರಿ?**

ತಂಡಗಳು ಬಲಿಷ್ಠರಾಗಿದ್ದರಿಂದಲೇ ವಿಶ್ವಕಪ್‌ನಂಥ ಮಹತ್ವದ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದುಕೊಂಡಿವೆ. ಪಾಕಿಸ್ತಾನ ಹಾಗೂ ಆಸ್ಟ್ರೇಲಿಯಾ ತಂಡ ಉತ್ತಮ ವೇಗದ ಆರಂಭಿಕ ಬೌಲರ್‌ಗಳನ್ನು ಹೊಂದಿವೆ.

◆ **ಹಿಂದಿನ ಹತ್ತು ವರ್ಷಗಳಲ್ಲಿ ಐಸಿಸಿ ಟೂರ್ನಿಗಳಲ್ಲಿ ಭಾರತ ಮಹತ್ವದ ಘಟ್ಟದ ಪಂದ್ಯಗಳಲ್ಲಿಯೇ ಸೋಲುತ್ತಿದೆಯಲ್ಲ?**

ಕ್ರಿಕೆಟ್‌ನಲ್ಲಿ ನಿಶ್ಚಿತವಾಗಿ ಹೀಗೆಯೇ ಇರುತ್ತದೆ ಎಂದು ಹೇಳುವುದು ಅಸಾಧ್ಯ. ವಿಶ್ವಕಪ್‌ನಲ್ಲಿ ಪ್ರಾಬಲ್ಯ ಮೆರೆದ ವೆಸ್ಟ್ ಇಂಡೀಸ್ ತಂಡ ಈಗೇನಾಗಿದೆ? ಇದು ನಿಜಕ್ಕೂ ಆಘಾತಕಾರಿ. ಕೆಲವು ದೇಶಗಳಷ್ಟೇ ಪ್ರಾಬಲ್ಯ ಹೊಂದಿದ್ದ ಈ ಕ್ರೀಡೆಯಲ್ಲಿ ಹೊಸ ರಾಷ್ಟ್ರಗಳು ಗಮನ ಸೆಳೆಯುತ್ತಿವೆ. ಪ್ರತಿಭಾನ್ವಿತ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಲ್ಲಿ ವೃತ್ತಿಪರವಾಗಿದ್ದ ಕ್ರಿಕೆಟ್ ಈಗ ಬೇರೆ ರಾಷ್ಟ್ರಗಳಲ್ಲಿಯೂ ವಿಸ್ತಾರವಾಗುತ್ತಿದೆ. ಇದರಿಂದ ಸ್ಪರ್ಧೆಯೂ ಹೆಚ್ಚಿದೆ. ಫಲಿತಾಂಶದಲ್ಲಿ ಏರುಪೇರಾಗಿದೆ.

◆ **ಭಾರತ ತಂಡದಲ್ಲಿ ಕರ್ನಾಟಕದ ಆಟಗಾರರ ಸಂಖ್ಯೆ ಕಡಿಮೆಯಾಗುತ್ತಿದೆಯಲ್ಲ?**

ತಂಡವಾಗಲಿ ಅಥವಾ ವೈಯಕ್ತಿಕವಾಗಲಿ ಕ್ರಿಕೆಟ್ ಚಕ್ರದ ಹಾಗೆ ತಿರುಗುತ್ತಲೇ ಇರುತ್ತದೆ. 1975ರ ದಶಕದಲ್ಲಿ ಬಿಸಿಸಿಐ ಜಗತ್ತಿನ ಬಡ ಕ್ರಿಕೆಟ್ ಮಂಡಳಿಯಾಗಿತ್ತು. ಆಟಗಾರರಿಗೆ ಕೊಡಲು ಹಣ ಇರಲಿಲ್ಲ. ತಂತ್ರಜ್ಞಾನದ ಬಳಕೆ ಗೊತ್ತಿರಲಿಲ್ಲ. ಆಗಲೇ ಕರ್ನಾಟಕದ ಆರು ಆಟಗಾರರು ದೇಶದ ತಂಡದಲ್ಲಿದ್ದರು. ಇದಾದ ಎರಡು ದಶಕಗಳ ಬಳಿಕ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಸುನಿಲ್ ಜೋಶಿ, ವೆಂಕಟೇಶ ಪ್ರಸಾದ, ರಾಹುಲ್ ದ್ರಾವಿಡ್ ಒಟ್ಟಿಗೆ ಭಾರತ ತಂಡದಲ್ಲಿ ಕಾಣಿಸಿಕೊಂಡರು. ಈಗ ಆಟಗಾರರ ಮನಸ್ಥಿತಿ, ಕ್ರಿಕೆಟ್ ನೋಡುವ ದೃಷ್ಟಿಕೋನ ಬದಲಾಗಿದೆ.

◆ **ಏನು ಬದಲಾಗಿದೆ? ಈ ಬದಲಾವಣೆ ದೇಶದ ವೃತ್ತಿಪರ ಕ್ರಿಕೆಟ್ ಚಟುವಟಿಕೆ ಮೇಲೆ ಪರಿಣಾಮ ಬೀರುತ್ತದೆಯೇ?**

ಪೋಷಕರು ಮೊದಲು ತಮ್ಮ ಮಕ್ಕಳು ಉತ್ತಮ ಶಿಕ್ಷಣ ಪಡೆದು ಒಳ್ಳೆಯ ಸರ್ಕಾರಿ ನೌಕರಿ ಗಳಿಸಬೇಕು ಎಂದು ಆಸೆ ಪಡುತ್ತಿದ್ದರು. ಈಗ ಕ್ರಿಕೆಟ್ ಆಡು, ಐಪಿಎಲ್, ಕೆಪಿಎಲ್ ಆಡು ಎನ್ನುತ್ತಿದ್ದಾರೆ. ಇವುಗಳನ್ನು ಆಡುವುದರಿಂದ ಉತ್ತಮ ಹಣ ಬರುತ್ತದೆ ಎಂದು ಹೇಳುತ್ತಿದ್ದಾರೆ. ದಶಕದ ಹಿಂದೆ ಸಚಿನ್ ತೆಂಡೂಲ್ಕರ್ ಜಗತ್ತಿನ ಕ್ರಿಕೆಟ್ ಪ್ರೇಮಿಗಳ ಕಣ್ಮಣಿಯಾಗಿದ್ದರು. ಈಗ ಅವರ ಸ್ಥಾನದಲ್ಲಿ ವಿರಾಟ್ ಕೊಹ್ಲಿ ಇದ್ದಾರೆ. ತಂಡಗಳ ಹಾಗೂ ಆಟಗಾರರ ಮನಸ್ಥಿತಿ ಬದಲಾದಂತೆ, ಕ್ರಿಕೆಟ್ ನೋಡುವ, ಆಡುವ ರೀತಿಯೂ ಬದಲಾಗಿದೆ. ಇದು ಆಗುತ್ತಲೇ ಇರುತ್ತದೆ.



| ಹಿಂದಿನ ಟೂರ್ನಿಗಳಲ್ಲಿ ವಿಶ್ವಕಪ್ ಗೆದ್ದವರು | | |
|---|---|---|
| ವರ್ಷ | ಚಾಂಪಿಯನ್ | ರನ್ನರ್ಸ್ ಅಪ್ |
| 1975 | ವೆಸ್ಟ್ ಇಂಡೀಸ್ | ಆಸ್ಟ್ರೇಲಿಯಾ |
| 1979 | ವೆಸ್ಟ್ ಇಂಡೀಸ್ | ಇಂಗ್ಲೆಂಡ್ |
| 1983 | ಭಾರತ | ವೆಸ್ಟ್ ಇಂಡೀಸ್ |
| 1987 | ಆಸ್ಟ್ರೇಲಿಯಾ | ಇಂಗ್ಲೆಂಡ್ |
| 1992 | ಪಾಕಿಸ್ತಾನ | ಇಂಗ್ಲೆಂಡ್ |
| 1996 | ಶ್ರೀಲಂಕಾ | ಆಸ್ಟ್ರೇಲಿಯಾ |
| 1999 | ಆಸ್ಟ್ರೇಲಿಯಾ | ಪಾಕಿಸ್ತಾನ |
| 2003 | ಆಸ್ಟ್ರೇಲಿಯಾ | ಭಾರತ |
| 2007 | ಆಸ್ಟ್ರೇಲಿಯಾ | ಶ್ರೀಲಂಕಾ |
| 2011 | ಭಾರತ | ಶ್ರೀಲಂಕಾ |
| 2015 | ಆಸ್ಟ್ರೇಲಿಯಾ | ನ್ಯೂಜಿಲೆಂಡ್ |
| 2019 | ಇಂಗ್ಲೆಂಡ್ | ನ್ಯೂಜಿಲೆಂಡ್ |

ಚಾಂಪಿಯನ್ ಆಗಿದ್ದ ಭಾರತ ತಂಡದಲ್ಲಿ ಕೊಹ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆಡಿದ್ದ ಒಂಬತ್ತು ಪಂದ್ಯಗಳಿಂದ ಒಟ್ಟು 282 ರನ್ ಗಳಿಸಿದ್ದರು. 2015ರ ವಿಶ್ವಕಪ್‌ನಲ್ಲಿ ಎಂಟು ಪಂದ್ಯಗಳಿಂದ 305 ರನ್, ಹಿಂದಿನ ಟೂರ್ನಿಯಲ್ಲಿ ಒಂಬತ್ತು ಪಂದ್ಯಗಳಿಂದ 55.38ರ ಬ್ಯಾಟಿಂಗ್ ಸರಾಸರಿಯಲ್ಲಿ 443 ರನ್ ಕಲೆಹಾಕಿದ್ದರು. ಹಿಂದಿನ ಮೂರು ವಿಶ್ವಕಪ್‌ಗಳಲ್ಲಿ ಆಡಿರುವ ಅನುಭವ ಮತ್ತು ಏಕದಿನ ವಿಶ್ವಕಪ್‌ನಲ್ಲಿ ಒಂದು ಬಾರಿ ತಂಡವನ್ನು ಮುನ್ನಡೆಸಿದ್ದು ಹೊಸ ಆಟಗಾರರೇ ಹೆಚ್ಚಿರುವ ಈಗಿನ ಭಾರತ ತಂಡಕ್ಕೆ ಅನುಕೂಲವಾಗಲಿದೆ.

## ಆಸ್ಟ್ರೇಲಿಯಾ ಸವಾಲು

ಕ್ರಿಕೆಟ್ ವಿಶ್ವಕಪ್‌ನಲ್ಲಿ ಹೆಚ್ಚು ಬಾರಿ ಟ್ರೋಫಿ ಗೆದ್ದ ದಾಖಲೆ ಹೊಂದಿರುವ ಆಸ್ಟ್ರೇಲಿಯಾ ತಂಡ ಭಾರತಕ್ಕೆ ಮೊದಲ ಕಠಿಣ ಎದುರಾಳಿ ಎನ್ನುವುದು ನಿಸ್ಸಂಶಯ. ಈ ತಂಡ 12 ಬಾರಿ ವಿಶ್ವಕಪ್‌ನಲ್ಲಿ ಆಡಿದ್ದು ಐದು ಸಲ ಚಾಂಪಿಯನ್ ಪಟ್ಟ ಗಳಿಸಿದೆ; ಎರಡು ಸಲ ರನ್ನರ್ಸ್ ಅಪ್, ಒಂದು ಸಲ ಕ್ವಾರ್ಟರ್ ಫೈನಲ್ ಮತ್ತು ಒಂದು ಸಲ ಸೆಮಿಫೈನಲ್ ತನಕ ಪ್ರವೇಶಿಸಿದೆ. ಭಾರತ ಕೂಡ ಇಷ್ಟೇ ಬಾರಿ ವಿಶ್ವಕಪ್‌ನಲ್ಲಿ ಆಡಿದ್ದು – ಎರಡು ಬಾರಿ ಟ್ರೋಫಿ ಜಯಿಸಿದರೆ, 2003ರಲ್ಲಿ ರನ್ನರ್ಸ್ ಅಪ್ ಹಾಗೂ ನಾಲ್ಕು ಸಲ ಸೆಮಿಫೈನಲ್‌ಗೆ ಬಂದು ಸೋತಿದೆ. ಇದರಲ್ಲಿ ಒಂದು ಬಾರಿ ಫೈನಲ್ ಮತ್ತು ಒಂದು ಬಾರಿ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧವೇ ಪರಾಭವಗೊಂಡಿದೆ.

ವಿಶ್ವಕಪ್‌ನಲ್ಲಿ ಉಭಯ ತಂಡಗಳು 12 ಪಂದ್ಯಗಳನ್ನಾಡಿದ್ದು, ಎಂಟರಲ್ಲಿ ಆಸ್ಟ್ರೇಲಿಯಾ, ಇನ್ನುಳಿದ ನಾಲ್ಕರಲ್ಲಿ ಭಾರತ ಜಯ ಪಡೆದಿದೆ. ಇದೇ ವರ್ಷದ ಮಾರ್ಚ್‌ನಲ್ಲಿ ಈ ಎರಡೂ ತಂಡಗಳ ನಡುವಿನ ಏಕದಿನ ಸರಣಿಯಲ್ಲಿ ಕಾಂಗರೂಗಳ ನಾಡಿನ ತಂಡ ಟ್ರೋಫಿ ಗೆದ್ದುಕೊಂಡಿತ್ತು. ಹೀಗಾಗಿ ಆಸ್ಟ್ರೇಲಿಯಾ ಪ್ರಬಲ ಎದುರಾಳಿಯಾಗುವುದು ನಿಶ್ಚಿತ. ವಿಶ್ವಕಪ್ ಪೂರ್ವ ತಯಾರಿಗಾಗಿ ಮೂರು ಏಕದಿನ ಮತ್ತು ನಾಲ್ಕು ಟಿ–20 ಪಂದ್ಯಗಳನ್ನಾಡಲು ಆಸ್ಟ್ರೇಲಿಯಾ ತಂಡ ಈಗಾಗಲೇ ಭಾರತ ಪ್ರವಾಸ ಕೈಗೊಂಡಿದೆ. ಇದು ಕೂಡ ಉಭಯ ತಂಡಗಳಿಗೆ